## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಮ್‌ಎಫ್‌ಸಿ ಹುನಗುಂದ ಇವರ ನ್ಯಾಯಾಲಯದಲ್ಲಿ

ಕ್ರಿಮಿನಲ್ ಮೊಕದ್ದಮೆ ನಂಃ 329/2016

ಸಿ.ಡಬ್ಲ್ಯೂ-8 ಪಿ.ಡಬ್ಲ್ಯೂ-3

| | |
|---|---|
| ಸಾಕ್ಷಿಯ ಹೆಸರು | ಃ ಸಂಗಮೇಶ ಮರೋಳ |
| ತಂದೆಯ ಹೆಸರು | ಃ ವೀರಪ್ಪ |
| ವಯಸ್ಸು | ಃ 40 ವರ್ಷ |
| ಉದ್ಯೋಗ | ಃ ಪೋಲಿಸ ಪೇದೆ |
| ವಾಸಸ್ಥಳ | ಃ ಹುನಗುಂದ. |

ದಿನಾಂಕಃ 21-01-2026 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಸಅ ರವರಿಂದಃ

2012 ರಿಂದ 2019 ವರೆಗೆ ನಾನು ಅಮೀನಗಡ ಪೋಲಿಸ ಠಾಣೆಯಲ್ಲಿ ಪೋಲಿಸ ಪೇದೆ ಅಂತಾ ಕರ್ತವ್ಯನಿರ್ವಹಿಸಿರುತ್ತೇನೆ.

ದಿ: 19-01-2016 ರಂದು ನಾನು ಠಾಣಾ ಕರ್ತವ್ಯದಲ್ಲಿದ್ದಾಗ ಚಾಸಾ-1 ರವರು ಠಾಣೆಗೆ ಹಾಜರಾಗಿ ಕನ್ನಡದಲ್ಲಿ ಪಿರ್ಯಾದಿಯನ್ನು ಬರೆದುಕೊಡಲು ಕೇಳಿಕೊಂಡ ಮೇರೆಗೆ ಪಿರ್ಯಾದಿದಾರ ಹೇಳಿದಂತೆ ನಾನು ಪಿರ್ಯಾದಿಯನ್ನು ಬರೆದು ದಸ್ತೂರ ಅಂತಾ ಸಹಿ ಹಾಕಿರುತ್ತೇನೆ. ದಿ: 20-01-2016 ರಂದು ಅಮೀನಗಡ ಪೋಲಿಸ ಠಾಣಾ ಆವರಣದಲ್ಲಿ ಅಪಘಾತಕೀಡಾದ ವಾಹನಗಳ ಕೆ.ಎಸ್.ಆರ್.ಟಿ.ಸಿ. ಬಸ್ಸ ಕೆಎ-29/ಎಫ್-1148 ಹಾಗು ಐಶರ್ ಕ್ಯಾಂಟರ ಲಾರಿ ಸಂ.ಕೆಎ-29/ಬಿ-2947 ನೇದ್ದವುಗಳನ್ನು ಚಾಸಾ-2 ಮತ್ತು 3 ರವರ ಸಮಕ್ಷಮ ಚಾಸಾ-13 ರವರು ವಾಹನ ತಡೆ ಪಂಚನಾಮೆಯನ್ನು ಮುಂಜಾನೆ 9.00 ರಿಂದ 10.00 ಗಂಟೆವರೆಗೆ ಜರುಗಿಸಿರುತ್ತಾರೆ.

ಪಿರ್ಯಾದಿಯನ್ನು ಸಾಕ್ಷಿನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-8 ಎಂದು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿ ದಸ್ತೂರ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ8(ಎ) ಎಂದು ಗುರುತಿಸಲಾಯಿತು.

ಪಾಟೀಸವಾಲುಃ ಆರೋಪಿ ಪರ ಶ್ರೀ ಸಿ.ಬಿ.ಎಸ್ ವಕೀಲರಿಂದ ಃ

ಪಿರ್ಯಾದಿ ನೀಡಲು ಚಾಸಾ-1 ಹಾಗು ಇನ್ನೊರ್ವ ವ್ಯಕ್ತಿ ಠಾಣೆಗೆ ಬಂದಿರುತ್ತಾರೆ. ಚಾಸಾ-1 ರವರ ಜೊತೆ ಬಂದ ವ್ಯಕ್ತಿಗೆ ಕನ್ನಡ ಭಾಷೆ ಬರುತ್ತಿತ್ತು. ಚಾಸಾ-1 ರವರಿಗೆ ಕನ್ನಡ ಭಾಷೆ ಬರುತ್ತದೆ. ಬಿಳಿ ಕಾಗದದ ಮೇಲೆ ಚಾಸಾ-1 ರವರ ಸಹಿಯನ್ನು ಪಡೆದುಕೊಂಡಿರುತ್ತೇನೆಂದರೆ ಸರಿಯಲ್ಲ. ಪಿರ್ಯಾದಿಯನ್ನು ಬರೆಯಲು ಪಿರ್ಯಾದಿದಾರನು ಮಾಹಿತಿ ನೀಡಿರುತ್ತಾನೆ. ಪಿರ್ಯಾದಿಯನ್ನು

ಮದ್ಯಾಹ್ನ 2.30 ರಿಂದ 3.00 ಗಂಟೆ ಅವಧಿಯಲ್ಲಿ ಬರೆದಿರುತ್ತೇನೆ. ಪಿರ್ಯಾದಿಯನ್ನು ಬರೆಯಲು ಪಿರ್ಯಾದಿದಾರನು ಯಾವುದೇ ಮಾಹಿತಿ ನೀಡಿರುವುದಿಲ್ಲ ನಾನೇ ಪಿರ್ಯಾದಿಯನ್ನು ಬರೆದು ಪಿರ್ಯಾದಿದಾರನ ಸಹಿ ಪಡೆದುಕೊಂಡಿರುತ್ತೇನೆಂದರೆ ಸರಿಯಲ್ಲ.

ಮರುವಿಚಾರಣೆ: ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ ಹುನಗುಂದ.